ನಾನು ಓದಿದ್ದು ಗದಗ ಜಿಲ್ಲೆಯ ಹೊಳೆಆಲೂರು ಅನ್ನೋ ಊರಲ್ಲಿ. ನಮ್ಮ ಕುಟುಂಬ ಅಲೆದಾಡ್ತಾ ಈ ಊರಿಗೆ ಬಂದಾಗ ನನಗೆ ಎಂಟು ವರ್ಷ ವಯಸ್ಸು. ಅಲ್ಲಿ ಮಹಾಜನ ಅನ್ನೋ ಟೀಚರ್ ಒಬ್ಬರು ಬೀದಿಯಲ್ಲಿ ಆಡ್ಕೋತಾ ಇದ್ದ ನನ್ನನ್ನ ಶಾಲೆಗೆ ಸೇರಿಸು ಅಂತೇಳಿ ನನ್ನಪ್ಪನಿಗೆ ಜಬರಿಸಿದರು. ನಾನು ಶಾಲೆ ಸೇರಿದ್ದು ಹೀಗೆ. ಕಾಲ ನನ್ನನ್ನ ತಳ್ಳಿಕೋತ ಮುಂದಮುಂದಕ್ಕ ಕರಕೊಂಡು ಹೋತು. ಬಹಳ ಬಡತನ ಮೇಡಂರೀ... ಯಾರೋ ಕೊಟ್ಟ ಬಟ್ಟೆ ಹಾಕ್ಕೊತಿದ್ದೆ, ಒಂದು ಹೊತ್ತು ಊಟಕ್ಕೂ ಪರದಾಟ ಇತ್ತು. ನನ್ನ ತಾಯಿ ತೀರಿಕೊಂಡಾಗ ನಾನು ಬಿ.ಎಸ್ಸಿ. ಮೊದಲನೇ ವರ್ಷದಲ್ಲಿದ್ದೆ. ನನ್ನ ಎರಡನೇ ತಮ್ಮ ಆಗಿನ್ನೂ ಎರಡೂವರೆ ವರ್ಷದವ. ಆಗ ಪರಿಸ್ಥಿತಿ ಬಹಳ ಕಷ್ಟ ಆಯ್ತು. ಅವರಿವರ ಬುತ್ತಿಯಲ್ಲಿ ದಿನ ತಳ್ಳಿದೆ. ಅರೆಹೊಟ್ಟೆನಾಗೆ, ಒಮ್ಮೊಮ್ಮಿ ದಿನವೆಲ್ಲ ಹಸಿದು ಓದಿದೆ. ಫೀಸು ಕಟ್ಟೋದೂ ಭಾರೀ ಕಷ್ಟ ಇತ್ತು. ಯಾರ‍್ಯಾರೋ ಮಹಾತ್ಮರು ಕೈಹಿಡಿದು ಮುಂದೆ ದಾಟಿಸಿದ್ರು. ಬದುಕು ದೊಡ್ಡದುರೀ... ಸ್ಕಾಲರ್‌ಶಿಪ್ ಸಿಕ್ತು, ಬಿ.ಎಸ್ಸಿ. ಮಾಡಿದೆ. ಆಮೇಲೆ ಎಂ.ಎ. ಕಟ್ಟಿದೆ, ಬಿ.ಎಡ್. ಮಾಡಿಕೊಂಡೆ. ಕೆಲವು ಕಾಲ ಹೈಸ್ಕೂಲು ಟೀಚರ್ ಆಗಿದ್ದೆ. ನಂತರ ಸ್ಪರ್ಧಾತ್ಮಕ ಪರೀಕ್ಷೆ ಕಟ್ಟಿ ಖಜಾನೆ ಅಧಿಕಾರಿಯಾದೆ. ಕೊನೆಗೆ ಜಿಲ್ಲಾ ಖಜಾನಾಧಿಕಾರಿಯಾಗಿ ನಿವೃತ್ತಿ ಆದೆ. ಈಗ ಕೊಪ್ಪಳದಾಗ ಇದ್ದೀನಿ. ನನ್ನ ಬಾಲ್ಯದ ದಿನಗಳಲ್ಲಿ ನಮ್ಮ ಜಾತಿಯ ಎಲ್ಲ ಉದ್ಯೋಗಗಳನ್ನು ಮಾಡುತ್ತಲೇ ಶಿಕ್ಷಣ ಪಡೆದೆ...

◆ **ಎಲ್ಲ ಉದ್ಯೋಗ ಅಂದ್ರೆ?**

ಅಂದ್ರೆ, ಪಾತ್ರೆ ಹೊತ್ತು ಬೀದಿಬೀದಿ ತಿರುಗಿ ಮಾರೋದು, ಪಾತ್ರೆಗಳ ಮೇಲೆ ಹೆಸರು ಹಾಕೋದು, ಬುಡಬುಡಕಿಯಿಂದ ಭಿಕ್ಷೆ ಬೇಡೋದು... ನಂತರದ ದಿನಗಳಲ್ಲಿ ದಿನಪತ್ರಿಕೆ ಹಂಚೋ ಕೆಲಸನೂ ಮಾಡೀನಿ.

◆ **'ಗೊಂದಲಿಗ' ಪದದ ಹಿನ್ನೆಲೆ ಏನು?**

'ಗೊಂದಳ' ಅಂದ್ರೆ ಒಂದು ರೀತಿಯ ಧಾರ್ಮಿಕ ಆಚರಣೆ. ದೇವಿಯ ನಾಮ ಸಂಕೀರ್ತನೆ ಮಾಡೋ ಜನರನ್ನ 'ಗೊಂದಲಿಗ'ರು ಅನ್ತಾರ. ನಾನು ತಮಾಷೆಯಾಗಿ ಹೇಳೋ ಅರ್ಥ ಒಂದದ. ಅದೇನಂದ್ರ, 'ಆಷಾಢ ಆಚರಣೆ' ಹೊತ್ತಿನ್ಯಾಗ ಎಲ್ಲ ಬಂಧುಬಾಂಧವರೂ ಒಂದು ಕಡೆ ಸೇರ‍್ತಾರಲ್ಲ, ಆಗ ನಮ್ಮ ಗೊಂದಲಿಗ ಓಣಿಯಷ್ಟೇ ಅಲ್ಲ, ಊರಿನ ವಾತಾವರಣನೇ ಬದಲಾಗಿ ಬಿಡ್ತಿತ್ತು. ನಾವೆಲ್ಲ ಭಜನೆ ಹಾಡ್ತಿದ್ವಿ, ನ್ಯಾಯ ಪಂಚಾಯ್ತಿ ಮಾಡ್ತಿದ್ವಿ, ಹಾರಾಟ ಚೀರಾಟ ಇರ್ತಿದ್ವು. ಸಣ್ಣ ಊರಿನೊಳಗ ಅದೊಂದು ಸಂಭ್ರಮ, ಗಲಿಬಿಲಿ, ಗದ್ದಲ, ಗೊಂದಲದ ವಾತಾವರಣ ಆಗ್ತಿತ್ತು. ಆಗೆಲ್ಲ ಊರವರು 'ಕುರಸಾಲ್ಯಾ ಸೂಳಿಮಕ್ಳು ಗೊಂದಲಿಗೇರ ಬಂದ್ರ ಇಡೀ ಊರ ಗದ್ದಲ ಹಿಡಿಸ್ತಾರು' ಅನ್ನುತ್ತಿದ್ರು... ಗೊಂದಲ ಮಾಡೋವ್ರು ಗೊಂದಲಿಗರು ಅಂತ ನನ್ನ ಊಹೆ. (ನಗು)

◆ **ಕುರಸಾಲ್ಯಾ ಅಂದ್ರೆ...**

ಅದೊಂದು ಬೈಗುಳ. 'ಸಾಲಾ' ಉರ್ದು ಶಬ್ದ. ದುಷ್ಟ, ಕಿಡಿಗೇಡಿ ಮಗ, ಮೋಸಗಾರ ನನ್ಮಗ ಅನ್ತಾರಲ್ರಿ ಆ ಅರ್ಥದಾಗ. ಅದರೊಳಗೆ ಪ್ರೀತಿ, ಬೇಜಾರು, ಸಿಟ್ಟು ಎಲ್ಲಾನೂ ಇತ್ತು ಅನ್ನಸ್ತದ. ಆ ಬೈಗುಳದ ಧ್ವನಿಯೊಳಗ ಇವರೆಲ್ಲ ಗುಂಪು ಸೇರಿ ದಾಂಧಲೆ ಮಾಡಕತ್ತಾರ ಅನ್ನೋ ಬೇಜಾರೇ ಜಾಸ್ತಿ ಇರ್ತಿತ್ತು.

◆ **'ಆಷಾಢ ಆಚರಣೆ' ಅಂದಿರಿ, ಆದರ ಬಗ್ಗೆ ತಿಳಿಸಿ.**

'ಆಷಾಢ ಆಚರಣೆ' ಅಂದ್ರೆ ವರ್ಷಕ್ಕೊಮ್ಮೆ ಆಷಾಢ ಮಾಸದೊಳಗ ನಮ್ಮ ಸ್ವಂತ ಊರಿಗೆ ಹೋಗೋದು, ನಮ್ಮ ಸಮುದಾಯದವರನ್ನ ಭೇಟಿ ಮಾಡೋದು ಒಂದು ಪದ್ಧತಿ. ಈ ಅವಧಿಯೊಳಗ ಗಂಡು-ಹೆಣ್ಣು ಮದುವೆ ಸಂಬಂಧ ಮಾಡ್ಕೊಳಾದು, ಬಂಧುಬಳಗ ನೋಡಾದು, ಹಣಕಾಸಿನ ವ್ಯವಹಾರ ಮಾಡೋದು, ನ್ಯಾಯ ಪಂಚಾಯ್ತಿ ಇದ್ರೆ ಮಾಡೋದು ಮಾಡ್ತಾರ. ನಮಗೆಲ್ಲ ಹಿರಿಯರಾಗಿ ನಮ್ಮ ಸಮುದಾಯದ 'ಪಂಚರು' ಇರ‍್ತಾರ, ಇವರು ಪಂಚಾಯ್ತಿ ನಡಸ್ತಾರ. ಹೋಗದೆ ಇದ್ರೆ ಬಹಿಷ್ಕಾರ ಹಾಕಿರೋ ಘಟನೆಗಳು ಬಹಳಷ್ಟವ. ಆದ್ರೆ ನಾನು ಬಹಳ ವರ್ಷಗಳ ಹಿಂದೇನೆ